# ಪ್ರಾರ್ಥನೆ

## ಶ್ರೀರಾಮಕೃಷ್ಣಸ್ತವಃ - ೧



ವಿಶುದ್ಧವಿಜ್ಞಾನಮಗಾಧಸೌಖ್ಯಂ
ವಿಶ್ವಸ್ಯ ಬೀಜಂ ಕರುಣಾಪಯೋಧಿಃ ।
ಅನಾದ್ಯನಂತಂ ಪ್ರಕೃತೇಃ ಪರಸ್ತಾತ್
ತತ್ ತತ್ತ್ವಮೇಕಂ ಭುವಿ ರಾಮಕೃಷ್ಣಃ ॥ ೧ ॥

ಪರಿಶುದ್ಧವಾದ ವಿಜ್ಞಾನಸ್ವರೂಪಿಯೂ, ಪರಮ ಸುಖಸ್ವರೂಪಿಯೂ, ವಿಶ್ವಕ್ಕೆ ಬೀಜವೂ, ಕರುಣೆಯ ಕಡಲೂ, ಆದಿ ಅಂತ್ಯಗಳಿಲ್ಲದ್ದೂ ಆಗಿ ಪ್ರಕೃತಿಯನ್ನು ಮೀರಿದ ಏಕೈಕ ತತ್ತ್ವವಾದ 'ಪರಬ್ರಹ್ಮ' ಎಂಬುದೇ ಭೂಮಿಗೆ ಅವತರಿಸಿರುವ ಶ್ರೀರಾಮಕೃಷ್ಣರು.

ನ ನೇತಿ ಭೀತ್ಯಾ ಶ್ರುತಯೋ ವದಂತಿ
ವದಂತಿ ಸಾಕ್ಷಾನ್ನ ಚ ಯಂ ಕದಾಚಿತ್ ।
ಚಿದೇಕರೂಪಃ ಶಿವ ಈಶ್ವರಾಣಾಂ
ಮಹೇಶ್ವರೋಽಸೌ ಭುವಿ ರಾಮಕೃಷ್ಣಃ ॥ ೨ ॥

ಯಾರ ಸ್ವರೂಪವನ್ನು 'ಇದು ಹೀಗೆ, ಇಷ್ಟೇ' ಎಂದು ನಿರ್ದಿಷ್ಟವಾಗಿ ವಿವರಿಸಲಾಗದೋ, ಭಯದಿಂದ ವೇದಗಳೂ 'ಇದಲ್ಲ' 'ಇದಲ್ಲ' ಎಂದು ಮಾತ್ರ ವರ್ಣಿಸುವವೋ, ಅಂತಹ ಜ್ಞಾನಸ್ವರೂಪಿ, ಮಹೇಶ್ವರನಾದ ಶಿವತತ್ತ್ವವೇ ಭೂಮಿಗೆ ಅವತರಿಸಿರುವ ಶ್ರೀರಾಮಕೃಷ್ಣರು.

ಯಂ ನಿತ್ಯಮಾನಂದಮನಂತಮೇಕಂ
ಶಿವೇತಿ ನಾಮ್ನಾ ಶ್ರುತಯೋ ಗೃಣಂತಿ ।
ತಸ್ಯಾವತಾರೋ ನರರೂಪಧಾರೀ
ಕೃಪಾಸುಧಾಬ್ಧಿರ್ಭುವಿ ರಾಮಕೃಷ್ಣಃ ॥ ೩ ॥

ನಿತ್ಯನೂ, ಆನಂದರೂಪಿಯೂ, ಅನಂತನೂ, ಏಕನೂ ಆಗಿರುವ ಯಾರನ್ನು ವೇದ ವೇದಾಂತಗಳು 'ಶಿವ' ಎಂದು ಸ್ತುತಿಸುವವೋ, ಆ ಪರತತ್ತ್ವವೇ ಮಾನವರೂಪ ಧರಿಸಿ ಭೂಮಿಗೆ ಬಂದಿರುವ ಕರುಣಾಮೃತಸಾಗರವಾದ ಶ್ರೀರಾಮಕೃಷ್ಣರು.

ಮಮೇತಿ ಬುದ್ಧಿರ್ವಿಷಯೇಷು ಯಸ್ಯ
ನಾಭೂತ್ ಕದಾಚಿತ್ ವಿಷಯಾತಿಗಸ್ಯ ।
ಸ ಕಾಮಿನೀಕಾಂಚನರಿಕ್ತಚಿತ್ತಃ
ಕೋಽಪ್ಯೇಕ ಆಸೀದ್ ಭುವಿ ರಾಮಕೃಷ್ಣಃ ॥ ೪ ॥

ವಿಷಯಭೋಗಗಳಲ್ಲಿ ನಾನು, ನನ್ನದು ಎಂಬ ಬುದ್ಧಿ ಇರದೆ, ಯಾರು ಎಂದಿಗೂ ಲೌಕಿಕ ಸುಖಭಾವಗಳನ್ನು ಮೀರಿದ ನೆಲೆಯಲ್ಲಿದ್ದರೋ, ಕಾಮಿನಿ-ಕಾಂಚನದ ಚಿಂತನೆಯೇ ಇಲ್ಲದ ಪರಿಶುದ್ಧ ಚಿತ್ತ ಯಾರದೋ ಅಂತಹ ಮಹಾಮಹಿಮರೇ ಭುವಿಗಿಳಿದ ಶ್ರೀರಾಮಕೃಷ್ಣರು.

— ಪ್ರಮದದಾಸ ಮಿತ್ರ

## ಸೂಕ್ತಿಪ್ರಭ

ಶ್ರೀರಾಮಕೃಷ್ಣರು ಯಾವುದನ್ನೂ ನಾಶ ಮಾಡಲು ಬಂದವರಲ್ಲ. ಅವರು ಎಲ್ಲವನ್ನೂ ಪೂರ್ಣಗೊಳಿಸಲು ಬಂದವರು.

— ಶ್ರೀಶಾರದಾದೇವಿ

ಎಲ್ಲೋ ಬಂಗಾಳದ ದೂರದ ಹಳ್ಳಿಯಲ್ಲಿದ್ದು, ಯಾವ ವಿದ್ಯಾಭ್ಯಾಸವೂ ಇಲ್ಲದೆ, ತಮ್ಮ ಸ್ವಂತ ಇಚ್ಛಾಶಕ್ತಿಯ ಬಲದಿಂದ ಸತ್ಯಸಾಕ್ಷಾತ್ಕಾರವನ್ನು ಮಾಡಿಕೊಂಡು, ಅದನ್ನು ಸಜೀವವಾಗಿ ಇಟ್ಟಿರುವುದಕ್ಕೆ ಕೆಲವು ಶಿಷ್ಯರನ್ನು ಬಿಟ್ಟು, ಎಲ್ಲರಿಗೂ ಅದನ್ನು ಹರಡಿದರು ಶ್ರೀರಾಮಕೃಷ್ಣರು.

— ಸ್ವಾಮಿ ವಿವೇಕಾನಂದ

ಅವರ ಧರ್ಮಿಕ ಚಟುವಟಿಕೆಗಳು ಹಾಗೂ ಅನುಭವಗಳು ಎಷ್ಟು ಸಮಗ್ರವಾಗಿದ್ದವು ಎಂದರೆ, ಭಾರತದಲ್ಲಾಗಲಿ, ಬೇರೆ ಎಲ್ಲಾದರೂ ಆಗಲಿ, ಬೇರೆ ಯಾವ ಧಾರ್ಮಿಕ ಮಹಾಪುರುಷನೂ ಅಂತಹ ಸಮಗ್ರತೆಯನ್ನು ಹೊಂದಿರಲಿಲ್ಲ.

— ಅರ್ನಾಲ್ಡ್ ಟಾಯ್ನ್‌ಬಿ

ರಾಮಕೃಷ್ಣರೆಂದರೆ ಯಾರು? ಮಾನವರೂಪದಲ್ಲಿ ಮೂಡಿ ಬಂದ ದೇವರು. ಅವರ ಅನಂತ ಅಮಾನುಷ ನೆಲೆಯ ಹಿಂದೆ, ಅವರ ವಿಶ್ವವ್ಯಾಪಕ ನೆಲೆಯ ಹಿಂದೆ ಭಗವಂತನೇ ನೆಲೆಸಿದ್ದನು.

— ಶ್ರೀ ಅರವಿಂದರು

ಶ್ರೀರಾಮಕೃಷ್ಣ ಪರಮಹಂಸರ ಜೀವನವು ಪ್ರಾಯೋಗಿಕ ಧರ್ಮದ ಒಂದು ಕಥೆಯಾಗಿದೆ. ಅವರ ಪ್ರೀತಿಗೆ ಭೌಗೋಳಿಕ ಅಥವಾ ಇನ್ನು ಯಾವುದೇ ಎಲ್ಲೆ ಇರಲಿಲ್ಲ.

— ಮಹಾತ್ಮಾ ಗಾಂಧೀಜಿ